ಕರ್ನಾಟಕ ಸರ್ಕಾರ

ಜಿಲ್ಲಾ ಪಂಚಾಯತ್ ಹಾವೇರಿ

**ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಛೇರಿ, ಜಿಲ್ಲಾಡಳಿತ ಭವನ, ಹಾವೇರಿ - 581110**

Email: dhohaveri@gmail.com Ph:08375-249066 Fax:08375-249009


ಕ್ರಸಂ/ಜಿಆಕುಕಹಾ/ಸಿಬ್ಬಂದಿ-1/ವಹಿ- 50/2022-23/2100 ದಿನಾಂಕ : 23-01-2023

## ಪತ್ರಿಕಾ ಪ್ರಕಟಣೆ

ವಿಷಯ: ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿ ಹುದ್ದೆಗಳಿಗೆ ಎಂಬಿಬಿಎಸ್ ವೈದ್ಯರನ್ನು ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡುವ ಕುರಿತು

ಉಲ್ಲೇಖ: 1. ಸರ್ಕಾರದ ಆದೇಶ ಸಂಖ್ಯೆ/ಆಕುಕ/297/ಹೆಚ್ಎಸ್ಹೆಚ್/2015 ಬೆಂಗಳೂರು ದಿ: 22/04/2016

2. ಸರ್ಕಾರದ ಆದೇಶ ಸಂಖ್ಯೆ/ಆಕುಕ/240/ಹೆಚ್ಎಸ್ಹೆಚ್/2017 ಬೆಂಗಳೂರು ದಿ: 31/05/2017

3. ಸರ್ಕಾರದ ಆದೇಶ ಸಂಖ್ಯೆ/ಆಕುಕ/228/ಹೆಚ್ಎಸ್ಹೆಚ್/2020 ಬೆಂಗಳೂರು ದಿ: 01/07/2020

4. ಮಾನ್ಯ ಜಿಲ್ಲಾಧಿಕಾರಿಗಳು, ಹಾವೇರಿ ಇವರ ಅನುಮೋದನೆ ದಿ: 23/01/2023

ಮೇಲ್ಕಾಣಿಸಿದ ವಿಷಯ ಹಾಗೂ ಉಲ್ಲೇಖಗಳಿಗೆ ಸಂಬಂಧಿಸಿದಂತೆ, ಹಾವೇರಿ ಜಿಲ್ಲೆಯಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ಸಮುದಾಯ ಆರೋಗ್ಯ ಕೇಂದ್ರ, ಆರೋಗ್ಯ ವಿಸ್ತರಣಾ ಕೇಂದ್ರಗಳಲ್ಲಿ ಖಾಲಿ ಇರುವ ಒಟ್ಟು 17 ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳ ಹುದ್ದೆಗಳಿಗೆ ಅರ್ಹ ಎಂಬಿಬಿಎಸ್ ವೈದ್ಯರನ್ನು ಗುತ್ತಿಗೆ ಆಧಾರದ ಮೇಲೆ ಮತ್ತು ಮೆರಿಟ್ ಕಂ ರೋಸ್ಟರ್ ಆಧಾರದ ಮೇಲೆ ನೇಮಕಾತಿ ಮಾಡಲು ದಿನಾಂಕ: 25/01/2023 ರಿಂದ 03/02/2023 ವರೆಗೆ ಅರ್ಜಿ ಅಹ್ವಾನಿಸಲಾಗಿದ್ದು, ಅರ್ಹ ಅಭ್ಯರ್ಥಿಗಳು ಮುದಂ/ನೊಂದಾಯಿತ ಅಂಚೆ ಮುಖಾಂತರ <u>"ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು, ಜಿಲ್ಲಾ ಆಡಳಿತ ಭವನ ಹಾವೇರಿ-581110"</u> ಇವರ ಹೆಸರಿಗೆ ಸಲ್ಲಿಸಲು ಸೂಚಿಸಿದೆ. ಇನ್ನು ಮುಂದೆ ಪ್ರತಿ ಸೋಮವಾರ ಹಾಗೂ ಗುರುವಾರ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಛೇರಿ, ಹಾವೇರಿ ಇಲ್ಲಿ ಎಂಬಿಬಿಎಸ್ ವೈದ್ಯರನ್ನು ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಕುರಿತು ನೇರ ಸಂದರ್ಶನ ನಡೆಸಲಾಗುವುದು.

ಗುತ್ತಿಗೆ ಎಂ.ಬಿ.ಬಿ.ಎಸ್ ವೈದರನ್ನು ನೇಮಕಾತಿ ಮಾಡಲು ತಯಾರಿಸಲಾದ ರೋಸ್ಟರ್

| ಕ್ರ ಸಂ | ಹುದ್ದೆಯ ಹೆಸರು | ಒಟ್ಟು ಹುದ್ದೆ | ವರ್ಗೀಕರಣ | | | | | | | | | |
|---|---|---|---|---|---|---|---|---|---|---|---|---|
| | | | ಪ್ರವರ್ಗ | ಇತರೆ | ಮಹಿಳಾ | ಗ್ರಾಮೀಣ | ಮಾ.ಸೈ | ಕ.ಮಾ.ಅ | ಯೋ.ನಿರಾ | ಅಂ.ವಿ | ತೃತೀಯ ಲಿಂಗ | ಒಟ್ಟು |
| 1 | ಎಂಬಿಬಿಎಸ್ ವೈದ್ಯಾಧಿಕಾರಿಗಳ ಗುತ್ತಿಗೆ ಆಧಾರದ ಮೇಲೆ ನೇಮಕಾತಿ | 17 | ಪ.ಜಾ | 1 | 1 | 1 | 0 | 0 | 0 | 0 | 0 | 3 |
| 2 | | | ಪ.ಪಂ | 1 | 0 | 0 | 0 | 0 | 0 | 0 | 0 | 1 |
| 3 | | | ಪ್ರ-1 | 1 | 0 | 0 | 0 | 0 | 0 | 0 | 0 | 1 |
| 4 | | | ಪ್ರ-2 ಎ | 1 | 1 | 0 | 0 | 0 | 0 | 0 | 0 | 2 |
| 5 | | | ಪ್ರ-2 ಬಿ | 0 | 1 | 0 | 0 | 0 | 0 | 0 | 0 | 1 |
| 6 | | | ಪ್ರ-3 ಎ | 1 | 0 | 0 | 0 | 0 | 0 | 0 | 0 | 1 |
| 7 | | | ಪ್ರ-3 ಬಿ | 0 | 0 | 0 | 0 | 0 | 0 | 0 | 0 | 0 |
| 8 | | | ಸಾ.ಅ | 2 | 3 | 2 | 0 | 0 | 0 | 1 | 0 | 8 |
| ಒಟ್ಟು | | | | 7 | 6 | 3 | 0 | 0 | 0 | 1 | 0 | 17 |

ಷರತ್ತುಗಳು:

1. ಅರ್ಹ ಅಭ್ಯರ್ಥಿಗಳು ಅರ್ಜಿ ಜೊತೆಗೆ ಎಸ್.ಎಸ್.ಎಲ್.ಸಿ, ಪಿ.ಯು.ಸಿ ಹಾಗೂ ಎಂಬಿಬಿಎಸ್ ವಿದ್ಯಾರ್ಹತೆಯ ಎಲ್ಲಾ ವರ್ಷದ ಅಂಕಪಟ್ಟಿಗಳು, ಹೌಸ್‌ಮೆನ್‌ಶಿಪ್ ಮುಗಿದ ಬಗ್ಗೆ ಪ್ರಮಾಣ ಪತ್ರ ಮತ್ತು ಕಾನೂನು ಬದ್ಧವಾಗಿ ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಪ್ರಮಾಣ ಪತ್ರ ಹಾಗೂ ಕೆಎಂಸಿ ನೊಂದಣಿ ಪ್ರಮಾಣ ಪತ್ರ, ಗುರುತಿನ ಚೀಟಿ (ಆಧಾರ) ಮತ್ತು ಕನ್ನಡ ಮಾಧ್ಯಮ, ಗ್ರಾಮೀಣ ಅಭ್ಯರ್ಥಿ, ಇತರೆ ಮೀಸಲಾತಿಗೆ ಸಂಬಂಧಿಸಿದ ದಾಖಲಾತಿಗಳನ್ನು ಝರಾಕ್ಸ ಮಾಡಿಸಿ ದೃಢೀಕರಿಸಿ ತಮ್ಮ ಬಯೋಡಾಟಾ ಅರ್ಜಿಯೊಂದಿಗೆ ದ್ವಿ-ಪ್ರತಿಯಲ್ಲಿ ಎಲ್ಲ ದಾಖಲಾತಿಗಳನ್ನು ಲಗತ್ತಿಸಿ ಸಲ್ಲಿಸುವುದು.
2. ವಯೋಮಿತಿ ಗರಿಷ್ಠ 50 ವರ್ಷ ಹಾಗೂ ಸರ್ಕಾರಿ ಸೇವೆಯಿಂದ ವಯೋನಿವೃತ್ತಿ ಹೊಂದಿದ ವೈದ್ಯರು 65 ವರ್ಷ ಮೀರುವಂತಿಲ್ಲ.
3. ಗುತ್ತಿಗೆ ನೇಮಕಾತಿಯು ಸರಕಾರದಿಂದ ಕಾಲ ಕಾಲಕ್ಕೆ ಹೊರಡಿಸಲಾಗಿರುವ ಆದೇಶದ ಅನುಬಂಧ-01 ಮತ್ತು 02 ರ ಷರತ್ತಿಗೆ ಒಳಪಟ್ಟಿರುತ್ತದೆ.
4. ಮೀಸಲಾತಿ ಕೋರಿದ ಅಭ್ಯರ್ಥಿಗಳು ಲಭ್ಯವಿಲ್ಲದಿದ್ದರೆ ಇತರೆ ಅಭ್ಯರ್ಥಿಗಳನ್ನು ಮೆರಿಟ್ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳುವ ಅಧಿಕಾರವನ್ನು ಮಾನ್ಯ ಜಿಲ್ಲಾಧಿಕಾರಿಗಳು, ಹಾವೇರಿ ಇವರು ಹೊಂದಿರುತ್ತಾರೆ.
5. ವೇತನ: ಮಾಸಿಕವಾಗಿ ಸಂಚಿತ ವೇತನ ರೂ.60000/-
6. ಸದರಿ ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳುವ ವೈದ್ಯರನ್ನು ಯಾವುದೇ ಕಾರಣಕ್ಕೂ ಸರ್ಕಾರಿ ಸೇವೆಯಲ್ಲಿ ಸಕ್ರಮಗೊಳಿಸಲಾಗುವುದಿಲ್ಲ
7. ಸದರಿ ಗುತ್ತಿಗೆ ಆಧಾರದ ಮೇಲೆ ವೈದ್ಯರನ್ನು 1 ವರ್ಷ ಅವಧಿಗೆ ನೇಮಕಾತಿ ಮಾಡಿಕೊಳ್ಳಲಾಗುವುದು. ಸದರಿ ವೈದ್ಯರು ತೃಪ್ತಿಕರವಾಗಿ ಸೇವೆ ಸಲ್ಲಿಸಿರುವುದನ್ನು ಪರಿಶೀಲಿಸಿ ಮರುವರ್ಷ ಗುತ್ತಿಗೆ ಅವಧಿ ವಿಸ್ತರಣೆ ಮಾಡಲಾಗುವುದು

<u>ಹೆಚ್ಚಿನ ಮಾಹಿತಿಗಾಗಿ ಕಛೇರಿ ವೇಳೆಯಲ್ಲಿ ಈ ಕಛೇರಿಯ ವೈದ್ಯರ ಸಂಕಲನದ ವಿಷಯ ನಿರ್ವಾಹಕರಾದ ಶ್ರೀ ಮಂಜು ಗಂಟಿಸಿದ್ದಪ್ಪನವರ, ಪ್ರಥಮ ದರ್ಜೆ ಸಹಾಯಕರು ಇವರನ್ನು (ದೂರವಾಣಿ ಸಂಖ್ಯೆ: 9538440933) ಸಂಪರ್ಕಿಸಲು ಕೋರಲಾಗಿದೆ.</u>

ಸಹಿ/-ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ
ಅಧಿಕಾರಿಗಳು, ಹಾವೇರಿ

ವಾ.ಸಾ.ಇ/ಹಾವೇರಿ/496/2022-23/ದೇಶಪಾಂಡೆಪಬ್ಲಿಸಿಟಿ